# ಅಂಚೆಚೀಟಿಯಲ್ಲಿ ‘ರಾಮ’ಮುದ್ರೆ



ಭಾರತ ಸೇರಿದಂತೆ ಹಲವು ದೇಶಗಳ ಧಾರ್ಮಿಕ, ಸಾಂಸ್ಕೃತಿಕ ಕುರುಹುಗಳಲ್ಲಿ ‘ರಾಮಾಯಣ’ವೂ ಒಂದಾಗಿದೆ. ರಾಮಕಥೆಯ ಈ ಮಹಾಕಾವ್ಯ ಅಂಚೆಚೀಟಿಗಳಲ್ಲಿ ಪ್ರಕಟಗೊಳ್ಳುವ ಮೂಲಕ ಆಧುನಿಕ ಸಂಪರ್ಕ ವ್ಯವಸ್ಥೆಯಲ್ಲೂ ಮಹತ್ವ ಪಡೆದುಕೊಂಡಿದೆ.

■ ಎನ್‌. ಜಗನ್ನಾಥ ಪ್ರಕಾಶ್




ಜಾಗತಿಕ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿರುವ ಎರಡು ಭಾರತೀಯ ಮಹಾಕಾವ್ಯಗಳಲ್ಲಿ ರಾಮಾಯಣ ಮೊದಲನೆಯದು. ರಾಮನ ಬದುಕಿನ ಕಥೆ ‘ರಾಮಾಯಣ’ವನ್ನು ಮಹರ್ಷಿ ವಾಲ್ಮೀಕಿ ರಚಿಸಿದ್ದು ಕ್ರಿ.ಪೂ. 500ರ ಆಸುಪಾಸಿನಲ್ಲಿ. ಅಲ್ಲಿಂದಾಚೆಗೆ ರಾಮಾಯಣ ನಿರಂತರವಾಗಿ ಬೇರೆ ಬೇರೆ ರೂಪುಗಳಲ್ಲಿ ಭಾರತೀಯರ ಬದುಕಿನ ಅವಿಭಾಜ್ಯ ಅಂಗವಾಗಿದೆ.

ರಾಮಾಯಣದ ಕಥಾನಾಯಕ ಶ್ರೀರಾಮನ ವೃತ್ತಾಂತ ಭಾರತದುದ್ದಕ್ಕೂ ಹರಡಿರುವ ವಿವಿಧ ಸಂಸ್ಕೃತಿಗಳಲ್ಲಿ ಹಾಸುಹೊಕ್ಕಾಗಿದೆ; ಕಥೆ ಕಾವ್ಯ, ಕಾದಂಬರಿ, ನೃತ್ಯ, ನಾಟಕ – ಹೀಗೆ ಎಲ್ಲಾ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿದೆ; ಆಧುನಿಕ ಪ್ರದರ್ಶನ ಕಲೆಗಳಲ್ಲಿ ಹಾಗೂ ವಿದ್ಯುನ್ಮಾನ ಜಗತ್ತಿನಲ್ಲಿಯೂ ಸ್ಥಾನ ಪಡೆದಿದೆ.

ರಾಮ ಹೊರದೇಶಗಳಲ್ಲೂ ಜನಪ್ರಿಯ. ಮೌಖಿಕವಾಗಿ, ಹಾಡು, ಕಥೆ, ಪದ್ಯ, ರಂಗಭೂಮಿಯ ಮೂಲಕ ‘ರಾಮಾಯಣ’ ಜನಮಾನಸದಲ್ಲಿ ಗಟ್ಟಿಯಾಗಿ ತಳವೂರಿದೆ. ಬಹು ಹಿಂದೆಯೇ ವಲಸೆ ಹೋಗಿರುವ ಭಾರತೀಯರು ಸುರಿನಾಂ, ಫಿಜಿ, ಗಯಾನ, ಮಾರಿಷಸ್‌ನಲ್ಲೂ ರಾಮಾಯಣವನ್ನು ಜೀವಂತವಾಗಿಟ್ಟಿದ್ದಾರೆ. ಭಾರತೀಯ ಉಪಖಂಡದಲ್ಲೇ ಇದ್ದು, ಈಗ ಏಷ್ಯನ್ ದೇಶಗಳೆನ್ನಿಸಿಕೊಂಡಿರುವ ಕಾಂಬೋಡಿಯಾ, ಥಾಯ್ಲೆಂಡ್, ಲಾವೋಸ್, ವಿಯೆಟ್ನಾಂ, ಮಲೇಷ್ಯಾ, ಬರ್ಮಾ (ಮ್ಯಾನ್ಮಾರ್), ಫಿಲಿಪ್ಪೀನ್ಸ್, ಇಂಡೊನೇಷ್ಯಾ, ಮಂಗೋಲಿಯಾ ಮತ್ತಿತರ ಕಡೆಗಳಲ್ಲಿ ರಾಮಾಯಣ ಪ್ರಸಂಗಗಳು ಅಲ್ಲಿಯವರ ಹೃದಯದಲ್ಲಿವೆ. ಈ ವಿಶ್ವರೂಪಿ ರಾಮಾಯಣ ಅಂಚೆಚೀಟಿಗಳಲ್ಲೂ ಸ್ಥಾನ ಪಡೆದಿದೆ.

ಭಾರತದ ಪ್ರಾಚೀನ ಮಹಾಕಾವ್ಯದ ಪ್ರಸಂಗ ಹಾಗೂ ಪಾತ್ರಗಳನ್ನು ಒಳಗೊಂಡ ಹತ್ತಾರು ಅಂಚೆಚೀಟಿಗಳು ಹಲವು ದೇಶಗಳಲ್ಲಿ ಪ್ರಕಟವಾಗಿವೆ. ಹಿಂದೂ ಪುರಾಣಗಳ ಅನೇಕ ಪಾತ್ರಗಳನ್ನು ಅಂಚೆಚೀಟಿಗಳಲ್ಲಿ ಆಗಾಗ ಅಳವಡಿಸಿಕೊಳ್ಳುತ್ತಲೇ ಇರುವ ನೆರೆಯ ಥಾಯ್ಲೆಂಡ್, ಶ್ರೀರಾಮನ ಚಿತ್ರವುಳ್ಳ ಸ್ಟ್ಯಾಂಪ್ ಬಿಡುಗಡೆ ಮಾಡಿದ ಮೊದಲ ದೇಶ. ಗಣಪತಿ, ಬ್ರಹ್ಮ, ವಿಷ್ಣು – ಹೀಗೆ ಭಾರತೀಯ ದೇವರುಗಳನ್ನು ಥಾಯ್ಲೆಂಡ್ ಆಗಿಂದಾಗ್ಗೆ ಅಂಚೆಚೀಟಿಗಳಲ್ಲಿ ಮುದ್ರಿಸುತ್ತಿದೆ. ಕಾಂಬೋಡಿಯಾ, ಇಂಡೊನೇಷ್ಯಾ ದೇಶಗಳೂ ಶ್ರೀರಾಮನ ಚಿತ್ರಗಳನ್ನು ಅಂಚೆಚೀಟಿಗಳಲ್ಲಿ ಬಳಸಿವೆ.

